ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 392/2017
ಡಿ.ಡಬ್ಲ್ಯೂ : 1

ದಿನಾಂಕಃ 24-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎಮ್ ಜೆ ಎಸ್ ವಕೀಲರಿಂದಃ

1. ಸರ್ವೆ ನಂಬರ್ 182/2 ಅದು ನನ್ನ ತಂದೆ 1 ನೇ ಪ್ರತಿವಾದಿಯ ಮೂಲ ಗೇಣಿ ಆಸ್ತಿ ಇರುತ್ತದೆ. ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂಬರ್ 1 ರಿಂದ 4 ನೇ ಆಸ್ತಿಯಿಂದ ಸುಮಾರು 1.5 ಕಿ.ಮೀ ಅಂತರದಲ್ಲಿ ಸರ್ವೆ ನಂಬರ್ 182/2 ಇರುತ್ತದೆ. ಸರ್ವೆ ನಂಬರ್ 182/2 ಗುಲ್ವಾಡಿ ಗ್ರಾಮ ಬೋಗಳುಕಟ್ಟೆ ಎಂಬ ಪ್ರದೇಶದಲ್ಲಿ ಇರುತ್ತದೆ. ದಾವಾ ಐಟಂ ನಂಬರ್ 1 ರಿಂದ 4 ಗುಲ್ವಾಡಿಯ ಸಂತೆಮಕ್ಕಿಯಲ್ಲಿ ಇರುತ್ತದೆ. ಎರಡು ಆಸ್ತಿಗಳ ಮಧ್ಯೆ ಸುಮಾರು 4 ಕಿ.ಮೀ ಅಂತರ ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕ 01-09-1974 ಕ್ಕೆ ಮೂಲಗೇಣಿ ಸರ್ವೆ ನಂಬರ್ 182/2 ಕ್ಕೆ ನನ್ನ ತಂದೆ ಸ್ವಂತ ಗೇಣಿದಾರರು ಆಗಿದ್ದರು ಎಂದರೆ ಸರಿ.

2. ಭೂ ನ್ಯಾಯ ಮಂಡಳಿಯವರು ಆ ಆಸ್ತಿಯನ್ನು ಸ್ವಂತ ಹಕ್ಕಿಗೆ 1 ನೇ ಪ್ರತಿವಾದಿಗೆ ನಿ.ಪಿ. 7 ರಂತೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂಬರ್ 1 ರಿಂದ 4 ರ ಸ್ವತ್ತುಗಳನ್ನು ಸಮಷ್ಟಿ ಹಕ್ಕಿನಲ್ಲಿ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೂಲ ಗೇಣಿ ಆಸ್ತಿಯನ್ನು 1 ನೇ ಪ್ರತಿವಾದಿಯವರು ಮಾರಾಟ ಮಾಡಿರುತ್ತಾರೆ. ಸರ್ವೆ ನಂಬರ್ 182/2 ಯಾವಾ ವರ್ಷದಲ್ಲಿ ಮಾರಾಟ ಮಾಡಿರುತ್ತಾರೆ ಎಂದು ನೆನಪಿರುವುದಿಲ್ಲ.

3. ಆ ರೀತಿ ಮಾರಾಟ ಮಾಡುವಾಗ ವಾದಿಯವರು ಹಾಗೂ ದಾವಾ ಎ ಶೆಡ್ಯೂಲ್ ಸ್ವತ್ತಿನ ಇತರ ಜಂಟಿ ಹಕ್ಕುದಾರರು ಆಕ್ಷೇಪಿಸಿರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜಿ ಫಾತಿಮಾರವರು 1998 ರ ಸಾಲಿನಲ್ಲಿ ಯಾವುದೇ ವಿಲ್ ನಾಮೆ ಮಾಡದೇ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದು ನುಡಿಯುತ್ತಾರೆ. ಫಾತಿಮಾರವರು ಮೃತರಾಗುವ ತನಕ ದಾವಾ ಐಟಂ ನಂ. 1 ರಿಂದ 4 ಫಾತಿಮಾ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಜಂಟಿ ಹಕ್ಕಿ ಹಾಗೂ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿಯಲ್ಲ.

4. ಫಾತಿಮಾರವರು ಅವರ ಗಂಡನ ಮನೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ನಮ್ಮ ಮನೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಫಾತಿಮಾರವರು ಮೃತ ರಾದ ನಂತರ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾದಿ, 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ತಾತ್ಕಾಲಿಕ ಏರ್ಪಾಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಏರ್ಪಾಟು ಪ್ರಕಾರ ದಾವಾ ಆಸ್ತಿಗಳನ್ನು ಮುಂದೆ ಪಾಲು ಪಟ್ಟಿಮಾಡಿಕೊಳ್ಳಬೇಕು ಎಂದು ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹಸನಬ್ಬನವರು ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಸದರಿ ಮನೆ ಈಗ ಇರುತ್ತದಾ ಎಂದರೆ ಸಾಕ್ಷಿ ಅದು ತುಂಬಾ ಹಳೆ ಮನೆ ಆಗಿದ್ದರಿಂದ ಬೇರೆ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ವಾಸ ಮಾಡುತ್ತಿದ್ದ ಮನೆ ಕೆಡವಿ 5-6 ವರ್ಷ ಆಗಿತ್ತು. ಕೆಡವುವಾಗ ಆ ಮನೆ ಸುಮಾರು 80 ವರ್ಷ ಪ್ರಾಯದ್ದು ಎಂದರೆ ಸರಿಯಲ್ಲ, ಸಾಕ್ಷಿ 50 ವರ್ಷ ಪ್ರಾಯದ್ದು ಇರಬಹುದು ಎಂದು ನುಡಿಯುತ್ತಾರೆ.

5. ಆ ಜಾಗದಲ್ಲಿ ಮೊದಲು ಹುಲ್ಲಿನ ಮನೆ ಇತ್ತು, ನಂತರ ಹುಲ್ಲಿನ ಮನೆ ತೆಗೆದು ಹಂಚಿನ ಮನೆ ನಿರ್ಮಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಹಂಚಿನ ಮನೆ ನಾದುರಸ್ತಿ ಇದ್ದರಿಂದ ಆ ಮನೆಯನ್ನು ತೆಗೆದು RCC ಮನೆ ನಿರ್ಮಿಸಲಾಗಿತ್ತು, ನನ್ನ ಪ್ರಕಾರ 3 ನೇ ಪ್ರತಿವಾದಿ ಆ ಮನೆ ನಿರ್ಮಿಸಿರುತ್ತಾರೆ. ಆ ಕೆಡವಿದ ಮನೆಯಲ್ಲಿ ನನ್ನ ತಂದೆ ಮನೆ ಕಟ್ಟಿದಾಗಿನಿಂದಲೂ ಅಲ್ಲೇ ವಾಸ ಇದ್ದರು. ನಂತರ ವಾದಿ, ನನ್ನ ತಂದೆ ಆ ಮನೆಯಿಂದ ಬೇರೆ ಬಂದು ಬೇರೆ ಮನೆ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ.

6. ಅವರ ಒಪ್ಪಿಗೆ ಪ್ರಕಾರ 3 ನೇ ಪ್ರತಿವಾದಿ ಹಾಗೂ ಅವರ ಪತ್ನಿ ಮಕ್ಕಳು ಆ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. 2017 ಅಕ್ಟೋಬರ್ ನಲ್ಲಿ ವಾದಿಯವರು ಪ್ರತಿವಾದಿ 1 ರಿಂದ 4 ರವರ ಬಳಿ ಭಾಗವನ್ನು ಕೇಳಿರುತ್ತಾರ ಎಂದರೆ ಸರಿ. ಜಿ ಅಬ್ದುಲ್ ಖಾದರ್ ಮತ್ತು ಹಸನಬ್ಬರವರು ಹಿಸ್ಸೆ ಕೊಡುವುದಿಲ್ಲ ಎಂದು ಹೇಳಿದ್ದರು ಎಂದರೆ ಸರಿ. ಸಾಕ್ಷಿ ಸ್ವಂತ ಆಸ್ತಿ ಆಗಿದ್ದರಿಂದ ಹಿಸ್ಸೆ ಕೊಡುವುದಿಲ್ಲ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಾವಾ ತಯಾರು ಮಾಡುವಾಗ ದಾವಾ ಆಸ್ತಿಗಳ RTC ಎರಡು ಆಸ್ತಿಗಳು 3 ನೇ ಪ್ರತಿವಾದಿಯ ಹೆಂಡತಿಯ ಹೆಸರಿನಲ್ಲಿ ಇದ್ದವು, ಎರಡು ಆಸ್ತಿಗಳು ಜಿ ಹಸನಬ್ಬರವರ ಮಗನ ಹೆಸರಿನಲ್ಲಿ ಇದ್ದವು. ಯಾವಾ ಆಧಾರದಲ್ಲಿ ಆಸ್ತಿಗಳು ಬದಲಾದವು ಎಂದರೆ ಸಾಕ್ಷಿ ನ್ಯಾಯಲಯದಲ್ಲಿ ಅವರು ಒಪ್ಪಿಗೆ ಕೊಟ್ಟ ನಂತರ ಕರಾರು ಆಗಿ ಆ ಆಧಾರದ ಮೇಲೆ ಬದಲಾಗಿರುತ್ತದೆ

ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಕರಾರು ಮಾರಾಟದ ಬಾಬ್ತು ಆಗಿರುತ್ತದೆ.

7. ನನ್ನ ತಂದೆ 1 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿಕೊಟ್ಟಿರುವುದಿಲ್ಲ, ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಜಿ.ಪಿ.ಎ. ಯನ್ನು ನಾನು ನೋಡಿರುವುದಿಲ್ಲ. ಜಿ.ಪಿ.ಎ. ಆಗಿದೆ ಎಂದು ನನಗೆ ಸ್ವತಃ ಗೊತ್ತಿರುತ್ತದೆ. ನೋಟರಿ ಪಬ್ಲಿಕ್ ರವರ ಮುಂದೆ ಜಿ.ಪಿ.ಎ. ಆಗಿರುತ್ತದೆ. ನಾನು ಹೇಳುವ ಸದರಿ ಜಿ.ಪಿ.ಎ. ನ್ಯಾಯಯುತವಾಗಿದೆಯಾ ಅಥವಾ ಮೋಸದ್ದಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿ.ಪಿ.ಎ. ಪ್ರಕಾರ ನಮ್ಮ ತಂದೆಗೆ ದಾವಾ ಆಸ್ತಿಯಲ್ಲಿ ಇದ್ದ ಹಕ್ಕು 3 ನೇ ಪ್ರತಿವಾದಿಗೆ ವರ್ಗಾವಣೆ ಆಗಿರುತ್ತದೆ.

8. ನಿ.ಡಿ. 7 ರ ದಾಖಲೆಯನ್ನು ನನ್ನ ತಂದೆಯವರು ಹಾಕಿರುತ್ತಾರೆ. ಆ ದಾವೆಯನ್ನು ರಾಜಿಯ ಮುಖಾಂತರ 1 ಮತ್ತು 3 ನೇ ಪ್ರತಿವಾದಿಗಳು ಮುಕ್ತಾಯ ಮಾಡಿಕೊಂಡಿರುತ್ತಾರೆ. ಆ ಎರಡು ದಾವೆಯನ್ನು ನನ್ನ ತಂದೆಯವರು ತಾನು ಕೊಟ್ಟ ಜಿ.ಪಿ.ಎಯನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಹಾಕಿರುತ್ತಾರೆ. ಆ 2 ದಾವೆಯಲ್ಲಿ ಪಕೀರ್ ವಾದಿಯವರು ಪಕ್ಷಗಾರರು ಇರುವುದಿಲ್ಲ ಎಂದರೆ ಸರಿ. ನಿ.ಡಿ. 7 ರ ತೀರ್ಪುಗಳನ್ನು ವಾದಿಗಳ ಗಮನಕ್ಕೆ ಬಾರದೆ ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸಾಕ್ಷಿ ಅವರ ಗಮನಕ್ಕೆ ತರುವ ಅಗತ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಸಂಪೂರ್ಣ ಆಸ್ತಿಯ ಹಕ್ಕು ಅವರಿಗೆ ಕೊಟ್ಟು ದುಡ್ಡು ಪಡೆದುಕೊಂಡಿರುತ್ತಾರೆ.

ಈ ಸಂದರ್ಭದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ